ಅರಣ್ಯ ಹಕ್ಕು ಕಾಯಿದೆ

68(767); ಶ್ರೀ ಅರಬೈಲು ಶಿವರಾಮ್ ಹೆಬ್ಬಾರ್ (ಯಲ್ಲಾಪುರ)

ಅ) ರಾಜ್ಯದಲ್ಲಿ 2006ರಲ್ಲಿ ಅರಣ್ಯ ಹಕ್ಕು ಕಾಯಿದೆ ಜಾರಿಗೆ ಬಂದ ಮೇಲೆ ಎಷ್ಟು ಮಂದಿಗೆ ಹಕ್ಕು ಪತ್ರ ನೀಡಲಾಗಿದೆ.

ಆ) ಪಾರಂಪರಿಕ ಅರಣ್ಯ ಅತಿಕ್ರಮಣದಾರರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ನಿಗಧಿಪಡಿಸಲಾಗಿದೆಯೇ;

ಇ) ಈ ತನಕ ಎಷ್ಟು ಮಂದಿ ಅರಣ್ಯ ಅತಿಕ್ರಮಣದಾರರಿಗೆ ಹಕ್ಕು ಪತ್ರ ನೀಡಲಾಗಿದೆ; (ಜಿಲ್ಲಾವಾರು ವರದಿಯನ್ನು ನೀಡುವುದು)

ಈ) ಎಲ್ಲಾ ಜಿಲ್ಲೆಗಳಲ್ಲಿಯೂ ಅರಣ್ಯ, ಸಮಿತಿಗಳ ರಚನೆ ಆಗಿದೆಯೇ; ಹಾಗಿದ್ದರೆ, ಅದಕ್ಕೆ ಬೇಕಾದಂತಹ ಸವಲತ್ತುಗಳನ್ನು ನೀಡಲಾಗಿದೆಯೇ

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಇದುವರೆಗೂ 7700 ಜನರಿಗೆ ಹಕ್ಕು ಪತ್ರಗಳನ್ನು ನೀಡಲಾಗಿದೆ.

7700 title deeds are distributed in the State

ಆ) ಅರಣ್ಯ, ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ನಿಗಧಿಪಡಿಸಿರುವುದಿಲ್ಲ.

There is no time limit has been fixed to submit application under Forest Rights Act

ಇ) ಮಾಹಿತಿಯನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

Information is given in Annexure-1

ಈ) 22 ಜಿಲ್ಲೆಗಳಲ್ಲಿ ಅರಣ್ಯ ಹಕ್ಕು ಸಮಿತಿಗಳನ್ನು ರಚಿಸಲಾಗಿದೆ ಹಾಗೂ ಅರಣ್ಯ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಟಾನಗೊಳಿಸಲು ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಮಾಹಿತಿಯನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

22 Districts are constituted Forest Rights committee and grants were released for implementing Forest Rights Act. Information is given in Annexure-2

ಅನುಬಂಧ-1

ಆರ್ಥಿಕ ದುರ್ಬಲ ಅಭ್ಯರ್ಥಿಗಳಿಗೆ ಇಡುವರಿಗೂ ವಿತರಿಸಿದ ಹಣ್ಣು ಪಡ್ಡಗಳ ವಿವರ

ಕ್ರ. ಸಂ.	ಜಿಲ್ಲೆಯ ಹೆಸರು	ವಿತರಿಸಿದ ಹಣ್ಣು ಪಡ್ಡಗಳ ವಿವರ			
		ಪರಿಶಿಷ್ಟ ಪಂಗಡ	ಇತರೆ ಸಾಮಾನ್ಯ ಅಭ್ಯರ್ಥಿಗಳು	ಸಮುದಾಯ ಹಣ್ಣುಗಳು	ಒಟ್ಟು
1	2	3	4	5	6
1	ಮೈಸೂರು	583	0	19	602
2	ಶಿವಮೊಗ್ಗ	280	75	1	356
3	ಚಿಕ್ಕಮಗಳೂರು	1713	0	0	1713
4	ಉತ್ತರ ಕನ್ನಡ	824	243	2	1069
5	ಚಾಮರಾಜನಗರ	1603	0	25	1628
6	ಕೊಡಗು	1338	0	45	1383
7	ದಕ್ಷಿಣ ಕನ್ನಡ	72	0	4	76
8	ಉಡುಪಿ	520	0	0	520
9	ಗದಗ	0	125	0	125
10	ಬೆಳಗಾವಿ	228	0	0	228
	ಒಟ್ಟು	7161	443	96	7700

ಅನುಬಂಧ-2

ಅರಣ್ಯೀಕರಣ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು (ಪ್ರವಾರ, ತರಬೇತಿ, ಇತ್ಯಾದಿಗಳಿಗಾಗಿ) ಜಿಲ್ಲೆಗಳಿಗೆ ಬಿಡುಗಡೆ ಮಾಡಿದ ಅನುದಾನದ ವಿವರ

(ರೂ.ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಬಿಡುಗಡೆ ಮಾಡಿದ ಅನುದಾನ
1	ಮೈಸೂರು	23.00
2	ಚಿಕ್ಕಮಗಳೂರು	27.00
3	ದಕ್ಷಿಣ ಕನ್ನಡ	23.00
4	ಉಡುಪಿ	17.00
5	ಕೊಡಗು	29.00
6	ರಾಮರಾಜನಗರ	34.00
7	ಉತ್ತರ ಕನ್ನಡ	61.65
8	ಶಿವಮೊಗ್ಗ	23.67
9	ತುಮಕೂರು	1.65
10	ರಾಯಚೂರು	2.00
11	ಹಾವೇರಿ	1.65
12	ಚಿತ್ರದುರ್ಗ	2.00
13	ದಾವಣಗೆರೆ	1.65
14	ಬಳ್ಳಾರಿ	1.65
15	ಬೆಳಗಾಂ	5.00
16	ಚಿಕ್ಕಬಳ್ಳಾಪುರ	1.65
17	ರಾಮನಗರ	1.65
18	ಬೆಂಗಳೂರು (ಗ್ರಾ)	1.65
19	ಕೊಪ್ಪಳ	1.65
20	ಹಾಸನ	1.65
21	ಧಾರವಾಡ	1.65
22	ಬೀದರ್	1.65
23	ಗುಲ್ಬರ್ಗಾ	1.65
24	ಯಾದಗಿರಿ	0.50
25	ಗದಗ್	1.65
26	ಕೋಲಾರ	1.65
27	ಬೆಂಗಳೂರು(ನ)	1.65
28	ಬಾಗಲಕೋಟೆ	1.65
29	ಬಿಜಾಪುರ	1.65
30	ಮಂಡ್ಯ	1.65
ಒಟ್ಟು		277.52

ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್:– ಮಾನ್ಯ ಉಪಾಧ್ಯಕ್ಷರೆ, ಅಕ್ರಮ ಸಕ್ರಮ ಎಂದು 2006 ರಲ್ಲಿ ಪಾರಂಪರಿಕ ಅರಣ್ಯ ಕಾನೂನು ಬಂತು, ಅದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಅರ್ಜಿ ಹಾಕುವುದಕ್ಕೆ ಸರ್ಕಾರ ಸಮಯವನ್ನು ಏನಾದರೂ ನಿಗದಿ ಮಾಡಿದೆಯೇ ಎಂದು ನಾವು ಅವರನ್ನು ಕೇಳಿದ್ದು, ಆಕ್ಟ್‌ನಲ್ಲಿ ಅರ್ಜಿಯನ್ನು ಈ ಸಮಯದೊಳಗೆ ಕೊಡಬೇಕೆಂದು ಹೇಳಿಲ್ಲ. ಹೊಸ ಅತಿಕ್ರಮಣದಾರರು ಅದರಲ್ಲಿ ಸೇರಿಕೊಳ್ಳಬಾರದು. ಆದರೆ ಹಳೆಯ ಅತಿಕ್ರಮಣದಾರರು ಅರ್ಜಿ ಕೊಡುವುದಕ್ಕೆ ಸಮಯವನ್ನು ನಿಗದಿಪಡಿಸಿಲ್ಲ. ಅಧಿಕಾರಿಗಳು ಸಮಯ ಮುಗಿದು ಹೋಯಿತು ಎನ್ನುವ ಮಾತನ್ನು ಹೇಳುತ್ತಾರೆ. ಆದರೆ ಮಾನ್ಯ ಮಂತ್ರಿಗಳು ಸಮಯವನ್ನು ನಿಗದಿಪಡಿಸಿಲ್ಲವೆನ್ನುವಂತಹ ಮಾತನ್ನು ಹೇಳುತ್ತಾರೆ, ಬಹಳ ಸಂತೋಷ. ಅದರ ಬಗ್ಗೆ ಮತ್ತೊಮ್ಮೆ ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಆಂಜನೇಯ:– ಮಾನ್ಯ ಉಪಾಧ್ಯಕ್ಷರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಕೇವಲ ಏಳು ವರ್ಷದೊಳಗೆ ಯಾರ್ಯಾರು ಅರಣ್ಯ ಪ್ರದೇಶದಲ್ಲಿ ಉಳುಮೆ ಮಾಡಿಕೊಂಡಿದ್ದಾರೆ, ಅವರಿಗೆ ಹಕ್ಕು ಪತ್ರ ಕೊಡುವುದು ಮತ್ತು ಸಕ್ರಮ ಮಾಡುವಂತಹ ಕ್ರಮವನ್ನು ಅನುಸರಿಸಬೇಕು ಎಂದು ಅರಣ್ಯ ಹಕ್ಕು ಕಾಯಿದೆಯಡಿಯಲ್ಲಿ ಹೇಳುತ್ತದೆ.

ಶ್ರೀ ಕೆ.ಜಿ. ಬೋಪಯ್ಯ:– ಉಳಿದವರಿಗೆ ಮೂರು ತಲೆಮಾರು ಎಂದು ಇದೆ.

ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್:– ಮಾನ್ಯ ಉಪಾಧ್ಯಕ್ಷರೆ, ಪಾರಂಪರಿಕ ಅರಣ್ಯ ವಾಸಿಗಳ ಬಗ್ಗೆ ಹೇಳಿ.

ಶ್ರೀ ಹೆಚ್. ಆಂಜನೇಯ:– ಪಾರಂಪರಿಕ ಅರಣ್ಯ ವಾಸಿಗಳಾಗಿರುವಂತಹ ಬುಡಕಟ್ಟು ಜನಾಂಗದವರಿಗೆ, ಆದಿವಾಸಿಗಳಿಗೆ, ಅರಣ್ಯ ವಾಸಿಗಳಿಗೆ ಬಹಳ ಕಡಿಮೆ ಅವಧಿಯಿದ್ದು, ಐದಾರು ವರ್ಷ ಅವರು ಜಮೀನಿನಲ್ಲಿ ಉಳುಮೆ ಮಾಡಿದ್ದರೆಂದರೆ ಅವರಿಗೆ ಆ ಜಮೀನನ್ನು

ಮಂಜೂರು ಮಾಡಬೇಕು. ಅದನ್ನು ಮಂಜೂರು ಮಾಡುವ ವಿಧಾನ ಏನೆಂದರೆ ಅಲ್ಲಲ್ಲೇ ಗ್ರಾಮ ಸಮಿತಿಗಳನ್ನು ತಹಶೀಲ್ದಾರ್, ಸಮಾಜ ಕಲ್ಯಾಣ ಅಧಿಕಾರಿಗಳು ಮತ್ತು ಅಸಿಸ್ಟೆಂಟ್ ಕಮಿಷನರ್ ಮಾಡಬೇಕು. ಗ್ರಾಮ ಸಮಿತಿಗಳನ್ನು ಮಾಡಿ, ಆ ಗ್ರಾಮ ಸಮಿತಿ ಮಾಡುವಂತಹ ಶಿಫಾರಸ್ಸಿನ ಮೇಲೆ ಆಧಾರದ ಮೇಲೆ ಹಕ್ಕುಪತ್ರವನ್ನು ನೀಡಬೇಕು. ಅವರು ಅಕ್ಷರ ಜ್ಞಾನವಿಲ್ಲದಂತಹ ಜನ, ಬಾಯಿಲ್ಲದಂತಹ ಜನ, ಅರಣ್ಯ ಪ್ರದೇಶದಲ್ಲಿ ವಾಸ ಮಾಡುತ್ತಾರೆ. ಅವರಿಗೆ ತಿಳುವಳಿಕೆ ಹೇಳುವುದಕ್ಕೋಸ್ಕರ ನಾವು ಎನ್.ಜಿ.ಓ. ಅನ್ನು ನೇಮಕ ಮಾಡಬಹುದು. ನಾವು ಖಾಸಗಿ ವ್ಯಕ್ತಿಯನ್ನು ಪ್ರಚಾರ ಮಾಡುವುದಕ್ಕಾಗಿ ಮತ್ತು ಅವರ ಅರ್ಜಿಯನ್ನು ಸ್ವೀಕಾರ ಮಾಡುವುದಕ್ಕಾಗಿ ಒಬ್ಬರನ್ನು ನೇಮಕ ಮಾಡಬಹುದು ಮತ್ತು ಅವರಿಗೆ ಭತ್ಯೆ ಕೊಡುವುದಕ್ಕೆ ಕೂಡ ಅವಕಾಶ ಇದೆ. ಈಗ ಯಾವ ಅಡೆತಡೆ ಇಲ್ಲ, ಅವೆಲ್ಲವನ್ನೂ ತೆಗೆದು ಹಾಕಿ, ಯಾರ್ಯಾರು ಅರಣ್ಯ ಪ್ರದೇಶದಲ್ಲಿ ಭೂಮಿಯನ್ನು ಉಳುಮೆ ಮಾಡುವವರಿಗೆ ಕೊಡಬೇಕು. ಅರಣ್ಯ ಇಲಾಖೆಯವರು ಬಹಳ ತೊಂದರೆ ಕೊಡುತ್ತಾರೆ. ಅರಣ್ಯ ಮಂತ್ರಿಗಳು ಆ ಸಮಿತಿಯ ಅಧ್ಯಕ್ಷರಾಗಿದ್ದಾರೆ.

ಶ್ರೀ ಬಿ. ರಮಾನಾಥ ರೈ:– 25 ವರ್ಷ ಇದ್ದರೆ, ಇಲ್ಲದೆ ಹೋದರೇ ಮೂರು ತಲೆಮಾರಿನವರಿಗೆ. ಗುರುತಿರಬೇಕು.

(ಗೊಂದಲ)

ಶ್ರೀ ಹೆಚ್. ಆಂಜನೇಯ:– ನಾನು ಉತ್ತರ ಹೇಳುತ್ತೇನೆ, ಇರಿ. ಆದ್ದರಿಂದ ಈಗಾಗಲೇ ಇದನ್ನು ಅನುಷ್ಠಾನಗೊಳಿಸುವುದಕ್ಕೆ ಒಂದು ಸಮಿತಿ ಇದೆ, ಅದಕ್ಕೆ ಅರಣ್ಯ ಸಚಿವರು ಅಧ್ಯಕ್ಷರಾಗಿದ್ದಾರೆ. ಇದರ ಕಾರ್ಯಾಚರಣೆ ಮಾಡತಕ್ಕಂಥ ಅಧಿಕಾರವನ್ನು ನಮ್ಮ ಇಲಾಖೆ ಮಾಡುತ್ತಿದೆ. ಹಾಗಾಗಿ ಬೇರೆಯವರಿಗೆ ಮೂರು ತಲೆಮಾರಿನ ಗುರುತಿರಬೇಕು ಎನ್ನುವಂತಹ ಆದೇಶ ಇದೆ.

ಉಪಾಧ್ಯಕ್ಷರು:– ಮಾನ್ಯ ಸದಸ್ಯರು ಅರ್ಜಿಯನ್ನು ಕೊಡುವುದಕ್ಕೆ ಕಾಲಮತಿಯನ್ನು ಕೇಳುತ್ತಿದ್ದಾರೆ.

ಶ್ರೀ ಹೆಚ್. ಆಂಜನೇಯ:– ನಾವು ಆ ಸಮಯವನ್ನು ನಿಗದಿ ಮಾಡಿದ್ದು ನಿಜ, ಕಾರಣವೇನೆಂದರೆ ತೀವ್ರತೆ ಬರಲಿ ಎನ್ನುವ ದೃಷ್ಟಿಯಿಂದ ಡಿಸೆಂಬರ್ 31 ತಾರೀಖಿನವರೆಗೆ ಎಂದು ಕೊಟ್ಟಿದ್ದೆವು. ಈಗ ಕಾಲದ ಗಡುವು ಇಲ್ಲ. ಈಗಲೂ ಅರ್ಜಿ ಹಾಕಿದರೂ ಕೂಡ ಕೊಡುತ್ತೇವೆ, ಯಾವುದೇ ರೀತಿಯ ಅನುಮಾನ ಇಲ್ಲ, ಆಗಬಹುದೇ?

ಉಪಾಧ್ಯಕ್ಷರು:– ನೀವು extend ಮಾಡಿದ್ದೀರಿ.

ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್:– ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಒಂದು ಆದೇಶ ಹೊರಡಿಸಬೇಕು.

ಶ್ರೀ ಹೆಚ್. ಆಂಜನೇಯ:– ಆಯಿತು, ಆದೇಶ ಮಾಡುತ್ತೇವೆ. ನೀವು ಶಾಸಕರು ಆಸಕ್ತಿಯನ್ನು ವಹಿಸಿ ಮೊನ್ನೆ ನಾನು ವಿರಾಜಪೇಟೆಗೆ ಹೋಗಿದ್ದೆನು. ಮಾನ್ಯ ಬೋಪಯ್ಯನವರು ಬಹಳ ಆಸಕ್ತಿಯನ್ನು ವಹಿಸಿದ್ದರು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಾವೆಲ್ಲ ಆಸಕ್ತಿಯನ್ನು ವಹಿಸಿ ಮಾಡಿದ್ದೇವೆ. ನಿಮ್ಮ ಅಧಿಕಾರಿಗಳು 31 ರಂದು ಕೊನೆಯ ದಿನಾಂಕವೆಂದು ಹೇಳುತ್ತಿದ್ದಾರೆ. ಒಂದು ಆದೇಶ ಕಳುಹಿಸಿದರೆ ಸರಿಯಾಗುತ್ತದೆ.

ಶ್ರೀ ಹೆಚ್. ಆಂಜನೇಯ:– ನಾಳೆಯೇ.

ಶ್ರೀ ಬಿ. ರಮಾನಾಥ ರೈ:– ಇದು ಒಂದು ಹಂತದಲ್ಲಿ ಈ ಅರಣ್ಯ ಹಕ್ಕು ಕಾಯಿದೆಯಲ್ಲಿ ಅರ್ಜಿ ಹಾಕುವುದು ಮುಕ್ತಾಯವಾಗಿತ್ತು. ನಾವು ಕ್ಯಾಬಿನೆಟ್ ಸಬ್ ಕಮಿಟಿ ಸೇರಿ ಅರ್ಜಿಯನ್ನು ಮತ್ತೆ ಸ್ವೀಕಾರ ಮಾಡಬೇಕು, ಹಳೆಯ ತಿರಸ್ಕೃತವಾದ ಅರ್ಜಿಯನ್ನು ಮತ್ತೆ ಪರಿಶೀಲನೆ ಮಾಡಬೇಕೆಂದು ತೀರ್ಮಾನ ಮಾಡಿದೆವು.

ಶ್ರೀ ಕೆ.ಜಿ. ಬೋಪಯ್ಯ:– ಅದಕ್ಕೆ ಲಿಮಿಟೇಷನ್ ಇಲ್ಲ.

ಶ್ರೀ ಬಿ. ರಮಾನಾಥ ರೈ:– ನೀವೆಲ್ಲ ಮುಕ್ತಾಯ ಮಾಡಿದ್ದೀರಿ, ಅದು ಹಿಂದೆ ಮುಕ್ತಾಯವಾಗಿತ್ತು.

ಶ್ರೀ ಕೆ.ಜಿ. ಬೋಪಯ್ಯ:– ಮುಕ್ತಾಯ ಆಗುವುದಕ್ಕೆ ಆಕ್ಟ್‌ನಲ್ಲಿ ಇಲ್ಲದಿದ್ದ ಮೇಲೆ ನೀವು ಹೇಗೆ ಮುಕ್ತಾಯ ಮಾಡಿದಿರಿ?

ಶ್ರೀ ಬಿ. ರಮಾನಾಥ ರೈ:– ನೀವು ಮುಕ್ತಾಯ ಮಾಡಿದಿರಿ.

ಶ್ರೀ ಕೆ.ಜಿ. ಬೋಪಯ್ಯ:– Forest Dwellers Act ಒಂದು Central Act. ಅದರಡಿ limitation ಇಲ್ಲ.

ಶ್ರೀ ಬಿ. ರಮಾನಾಥ ರೈ:– ನಾವು ಬರುವಾಗ ಮುಕ್ತಾಯವಾಗಿತ್ತು.

ಶ್ರೀ ಕೆ.ಜಿ. ಬೋಪಯ್ಯ:– ಮುಕ್ತಾಯವಾಗಿತ್ತು ಎಂದು ನೀವು ಹೇಳಿಕೊಳ್ಳಬಹುದು. ಅದರಲ್ಲಿ ಇಲ್ಲದ್ದಿದ್ದಾಗ ನೀವು ಸದನಕ್ಕೆ ತಪ್ಪು ಸಂದೇಶ ಏಕೆ ಕೊಡುತ್ತೀರಿ? Forest Dwellers Act ತೋರಿಸಿ. ಅದರಲ್ಲಿ no limitation.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನಾವು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಿ, ಅರ್ಜಿ ಸ್ವೀಕಾರ ಮಾಡಬೇಕೆಂದು ಮಾಡಿದೆವು.

ಶ್ರೀ ಕೆ.ಜಿ. ಬೋಪಯ್ಯ:– ಎಲ್ಲಿದೆ?

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಅದನ್ನು ಏಕೆ ಮುಕ್ತಾಯ ಮಾಡಿದಿರಿ?

ಶ್ರೀ ಕೆ.ಜಿ. ಬೋಪಯ್ಯ:– ನಾವು ಮುಕ್ತಾಯ ಮಾಡಿಲ್ಲ.

ಶ್ರೀ ಬಿ. ರಮಾನಾಥ ರೈ:– ಅದು 17% ಮಾತ್ರ ತೀರ್ಮಾನವಾಗಿತ್ತು. ಅದು ಮುಕ್ತಾಯ ಆಗಬೇಕೆಂದು ಮಾಡಿದ್ದು, ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ ಮತ್ತೆ ಅರ್ಜಿಯನ್ನು ತೆಗೆದುಕೊಳ್ಳಬೇಕೆಂದು ಮಾಡಿದೆವು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:– ಇವರು ವಿಚಾರವನ್ನು ಬೇರೆ ಎಲ್ಲೆಲ್ಲಿಗೋ ತೆಗೆದುಕೊಂಡು ಹೋಗುತ್ತಾರೆ.

ಶ್ರೀ ಬಿ. ರಮಾನಾಥ ರೈ:– ನಾವಲ್ಲ, ನೀವು ಅಧಿಕಾರದಲ್ಲಿ ತಪ್ಪು ಮಾಡಿದ್ದೀರೆಂದು ಎಂದು ಹೇಳಿದೆ.

ಶ್ರೀ ಕೆ.ಜಿ. ಬೋಪಯ್ಯ:– ನೀವು ಇಲ್ಲಿ circular ಕೊಟ್ಟು change ಮಾಡುವುದಕ್ಕೆ ನಿಮಗೆ ಏನೂ ಅಧಿಕಾರ ಇಲ್ಲ.

ಶ್ರೀ ಬಿ. ರಮಾನಾಥ ರೈ:– ನೀವು ಮುಕ್ತಾಯ ಮಾಡಿದ್ದೀರಿ, ನೀವು 17% ಜನರಿಗೆ ಮಾತ್ರ ಮಂಜೂರಾತಿ ಕೊಟ್ಟಿರುವುದು. ನೀವು ಅರ್ಜಿಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ.

ಶ್ರೀ ಕೆ.ಜಿ. ಬೋಪಯ್ಯ:– ಅದು ಇರಬಹುದು.

ಶ್ರೀ ಬಿ. ರಮಾನಾಥ ರೈ:– ನಾವು ಅರ್ಜಿಗಳನ್ನು ತೆಗೆದುಕೊಳ್ಳುವಂತೆ ಮಾಡಿದ್ದು.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಉಪಾಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ highest ಕೊಟ್ಟಿದ್ದೇವೆ. ನೀವು ಕೊಟ್ಟಿಲ್ಲ ಅಷ್ಟೇ, ನೀವು ಎಂ.ಎಲ್.ಎ. ಇದ್ದಿರಲ್ಲಾ ಏಕೆ ಕೊಡಲಿಲ್ಲ? ಸುಮ್ಮನೇ ರಾಜಕೀಯದ ಮಾತು ಮಾತನಾಡಬೇಡಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಮಾನ್ಯ ಉಪಾಧ್ಯಕ್ಷರೆ, ತಿರಸ್ಕೃತವಾಗಿರುವಂಥದ್ದನ್ನು ಮತ್ತೆ ತೆಗೆದುಕೊಂಡಿದ್ದೇವೆ, ಇದು ನೂರಕ್ಕೆ ನೂರು ಸತ್ಯ, ನೂರಕ್ಕೆ ನೂರು ಸತ್ಯ, ನೂರಕ್ಕೆ ನೂರು ಸತ್ಯ.

ಉಪಾಧ್ಯಕ್ಷರು:– ಆಯಿತು.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನಮ್ಮ ಊರು ಎಂದಿರಲ್ಲಾ, ನಮ್ಮಲ್ಲಿ ಆ ಸಮಸ್ಯೆ ಇಲ್ಲ.

ಶ್ರೀ ಕೆ.ಜಿ. ಬೋಪಯ್ಯ:– ನೀವು ಅಧ್ಯಕ್ಷರಲ್ಲಾ.. ..

ಶ್ರೀ ಎಸ್. ಸುರೇಶ್ ಕುಮಾರ್:– ಮಾನ್ಯ ಉಪಾಧ್ಯಕ್ಷರೆ, ಅವರು ಸಚಿವರು ಎನ್ನುವುದನ್ನು ಮರೆತು ಬಿಟ್ಟಿದ್ದಾರೆ. He is not a Cabinet Minister. ನೂರಕ್ಕೆ ನೂರು ಸತ್ಯ ಎಂದರು ಅವರು ಜವಾಬ್ದಾರಿ ಸಚಿವರಾಗಿ ಮಾತನಾಡಲಿ, ಸಚಿವರಾಗಿ ಗಂಭೀರವಾಗಿ ಮಾತನಾಡಲಿ.

ಉಪಾಧ್ಯಕ್ಷರು:– ಆಯಿತು, ಕುಳಿತುಕೊಳ್ಳಿ.

ಶ್ರೀ ಬಿ. ರಮಾನಾಥ ರೈ:– ನಾನು ಗಂಭೀರವಾಗಿಯೇ ಮಾತನಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್:– ಇಲ್ಲಿ slogan ಹಾಕುವುದು?

ಶ್ರೀ ಬಿ. ರಮಾನಾಥ ರೈ:– ರಾಜ್ಯ ಸಭಾಧ್ಯಕ್ಷರಾಗಿದ್ದವರು ಜವಾಬ್ದಾರಿ ತೆಗೆದುಕೊಂಡು ಮಾತನಾಡಲಿ.

ಶ್ರೀ ಕೆ.ಜಿ. ಬೋಪಯ್ಯ:– ನಾನು ಕೇಂದ್ರದಲ್ಲಿ ಜವಾಬ್ದಾರಿ ಇದ್ದೇ ಮಾತನಾಡಿದ್ದೇನೆ, ನಾವು ನಿಮ್ಮ ಹಾಗೆ ಬಾಯಿಗೆ ಬಂದ ಹಾಗೆ ಮಾತನಾಡುವುದಿಲ್ಲ. ನಾನು ಜವಾಬ್ದಾರಿಯಿಂದಲೇ ಮಾತನಾಡುತ್ತಿದ್ದೇನೆ.

ಶ್ರೀ ಬಿ. ರಮಾನಾಥ ರೈ:– ನಾನು ಜವಾಬ್ದಾರಿಯಿಂದಲೇ ಮಾತನಾಡುತ್ತಿದ್ದೇನೆ.

ಶ್ರೀ ಕೆ.ಜಿ. ಬೋಪಯ್ಯ:– ತಾವು ಆ ಕಾಯಿದೆಯನ್ನು ಇನ್ನೊಂದು ಸಾರಿ ಓದಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ನೀವು ಮಾಡಿದ್ದನ್ನು ಹೇಳುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ತಾವು ಯಾವುದಕ್ಕೆ ಯಾವುದನ್ನು ಹೇಳುತ್ತೀರಿ.

ಶ್ರೀ ಬಿ. ರಮಾನಾಥ ರೈ:– ನಿಮ್ಮ ಸರ್ಕಾರ ಮಾಡಿದ್ದನ್ನು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು:– ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ:– ಅರ್ಜಿಯನ್ನು ಸ್ವೀಕಾರ ಮಾಡುತ್ತಿರಲಿಲ್ಲ, ನಿಲ್ಲಿಸಿದ್ದರು. ನಾವು ತಿರಸ್ಕೃತವಾಗಿದ್ದನ್ನು ಮತ್ತೆ ಪರಿಷ್ಕರಿಸಬೇಕೆಂದು ತೀರ್ಮಾನ ಮಾಡಿದೆವು.

ಉಪಾಧ್ಯಕ್ಷರು:– ಆಯಿತು, ಕುಳಿತುಕೊಳ್ಳಿ.

ಶ್ರೀ ಕೆ.ಜಿ. ಬೋಪಯ್ಯ:– ನಿಮ್ಮ ಆದೇಶವಿಲ್ಲ, ಎರಡರಲ್ಲಿ ಅದಕ್ಕೆ provision ಇದೆ.

ಶ್ರೀ ಎಸ್. ಸುರೇಶ್ ಕುಮಾರ್:– ಮಾನ್ಯ ಉಪಾಧ್ಯಕ್ಷರೆ, ನನಗೆ ಈಗ ಗೊತ್ತಾಯಿತು. ಒಂದು ಊರಿಗೆ ಒಂಟಿ ಸಲಗ ನುಗ್ಗಿದರೆ ಏನಾಗುತ್ತದೆಂದು ಈಗ ಗೊತ್ತಾಯಿತು.

ಶ್ರೀ ಕೆ.ಜಿ. ಬೋಪಯ್ಯ:– ಸತ್ಯ ಹೇಳಿದರೆ ಸಿಟ್ಟು ಯಾಕೆ?

(ಈ ಹಂತದಲ್ಲಿ ಅಧ್ಯಕ್ಷರು ಸಭಾಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಬಿ. ರಮಾನಾಥ ರೈ:– ನಾವು ಸತ್ಯಕ್ಕೆ ದೂರವಾದ ಮಾತನ್ನು ಹೇಳಿದಾಗ ತಾವು ಮಾತನಾಡಬೇಕು.

ಅಧ್ಯಕ್ಷರು:– ಆಯಿತು, ಸಾಕು ಬಿಡಿ.

(ಗೊಂದಲ)

ಶ್ರೀ ಹೆಚ್. ಆಂಜನೇಯ:– ನಾನು ಈಗಾಗಲೇ ಉತ್ತರ ಹೇಳಿದ್ದೇನೆ. ನಾನು ಅದನ್ನು ರದ್ದು ಮಾಡಿದ್ದು, ಅದಕ್ಕೆ ದಿನಾಂಕವೇ ಇಲ್ಲ. ನಾವು ಡಿಸೆಂಬರ್ 31ನೇ ತಾರೀಖು ಎಂದು ಏಕೆ ನಿಗದಿ ಮಾಡಿದ್ದು ಎಂದರೆ, ತೀವ್ರತೆ ಬರಲಿ, ಅರ್ಜಿಯನ್ನು ಹಾಕಲಿ ಎನ್ನುವ ದೃಷ್ಟಿಯಿಂದ ಚುರುಕಾಗಿ ಕೆಲಸ ಆಗಬೇಕೆಂದು ಮಾಡಿದ್ದೇವೆ. ಈಗ ಆ ದಿನಾಂಕವನ್ನು ತೆಗೆದು ಹಾಕುತ್ತೇವೆ, ಎಲ್ಲಿಯವರೆಗೆ ಅರ್ಜಿಯನ್ನು ಕೊಡುತ್ತಾರೆ, ಅಲ್ಲಿಯವರೆಗೆ ಅರ್ಜಿಯನ್ನು ಪರಿಶೀಲನೆ ಮಾಡುತ್ತಿರಬೇಕು, ಅವರಿಗೆ ಹಕ್ಕುಪತ್ರವನ್ನು ಕೊಡುತ್ತಿರಬೇಕು, ಆಗಬಹುದೇ?

ಅಧ್ಯಕ್ಷರು:– ಆಯಿತು, good. ಈಗ ಪ್ರಶ್ನೋತ್ತರ ವೇಳೆ ಮುಗಿಯಿತು. ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ,

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 8ನೇ ಪಟ್ಟಿಯಲ್ಲಿರುವ 230 ಪ್ರಶ್ನೆಗಳ ಪೈಕಿ 160 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ಮಂಡಿಸಲಾಯಿತು.

(ಅನುಬಂಧ–3)

ಅಧ್ಯಕ್ಷರು:– ಈಗ ನಿಯಮ 69ರ ಮೇಲೆ ಡಾ: ಕಸ್ತೂರಿ ರಂಗನ್ ವರದಿ ಬಗ್ಗೆ ಚರ್ಚೆ.